O.S. No. 19/2024 chief of PW1

ದಿಃ 26-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ ಪಿ ಬಿ ಎ ವಕೀಲರಿಂದ.

ಈ ದಾವೆಯಲ್ಲಿ ನಾನು 3 ನೇ ವಾದಿಯಾಗಿದ್ದು ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೆನೆ. ಅದರಲ್ಲಿ ಬರೆದಿರುವ ಎಲ್ಲ ಅಂಶಗಳು ಸತ್ಯವಾಗಿರುತ್ತವೆ ಮತ್ತು ಸದ್ರಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

**ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ**

1) ಒಂದು ಸಾಮಾನ್ಯ ಮೊಕ್ತಿಯಾರ್ ನಾಮೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 1 ಎಂದು,**
2) ಒಂದು ಕೈ ಬರಹ ಪಹಣಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 2 ಎಂದು,**
3) ಎರಡು ಗಣಕೀಕೃತ ಪಹಣಿಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ 3 ಮತ್ತು 4 ಎಂದು,**
4) ಎಮ್ ಇ ನಂಬರ 29, 400, 509, 584, 586, 646, 762, 780, 1042, 1032 ರ ದೃಢಿಕೃತ ನಕಲುಗಳನ್ನು ಒಟ್ಟಾರೆಯಾಗಿ **ನಿಪಿ 5 ಎಂದು,**
5) ನಮೂನೆ-7 ರ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 6 ಎಂದು,**
6) ಭೂ ನ್ಯಾಯ ಮಂಡಳಿ ಹಳಿಯಾಳ ರವರ ಆದೇಶದ ದೃಢಿಕೃತ ನಕಲನ್ನು ಹಾಜರುಪಡಿಸಿದು ಅದನ್ನು **ನಿಪಿ 7 ಎಂದು,**
7) ನಮೂನೆ-10 ರ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 8 ಎಂದು,**
8) ಎರಡು ಮರಣ ಪ್ರಮಾಣ ಪತ್ರಗಳ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ **ನಿಪಿ 9 ಮತ್ತು 10 ಎಂದು,**
9) ಅಸಲು ದಾವೆ ಸಂಖ್ಯೆ 43/2016 ರ ವಾದ ಪತ್ರ, ಪ್ರತಿಜ್ಞಾ ಪತ್ರ ಮತ್ತು ವಿವಾದಾಂಶಗಳ ದೃಢಿಕೃತ ನಕಲುಗಳನ್ನು ಒಟ್ಟಾರೆಯಾಗಿ **ನಿಪಿ 11 ಎಂದು**,
10) ಅಸಲು ದಾವೆ ಸಂಖ್ಯೆ 43/2016 ರ ಆದೇಶ ಪುಟದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 12 ಎಂದು,**

11) ದಿನಾಂಕ 26-06-2023 ರ ಕೃಷಿ ಜಮೀನುಗಳ ವಾಟಣಿ ಪತ್ರದ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು **ನಿಪಿ 13 ಎಂದು** ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.